ತೆರಬೇಕಾದ ಕಂದಾಯ ಎಂದು ಯಾಕೆ ಅಂದುಕೊಳ್ಳಬಾರದು? ಹೀಗೆ ಯೋಚಿಸುವುದೂ ಸರಿಯಲ್ಲ. ತನ್ನ ಅಪ್ಪ, ಅಮ್ಮನ ಕೊನೆಗಾಲದಲ್ಲಿ ತನ್ನದಾಗಿರುವ ಹಣದಿಂದ ಅತ್ತಿಗೆ ಅವರಿಗೆ ಒಂದು ತುತ್ತು ಅನ್ನ ಹಾಕಿದರೆ ಪಾಪ ಬರುತ್ತದೆಯಾ? ಅಪ್ಪ..., ಅಪ್ಪ.. ಎಂದು ಮಾತುಮಾತಿಗೆ ತನ್ನ ಅಪ್ಪನ ಹೆಸರು ಎಳೆದು ತರುವ ಈ ನಾಗಶ್ರೀ ತಾನೇ ಅಂತಾ ಸ್ಥಿತಿಯಲ್ಲಿದ್ದಿದ್ದರೆ ಏನು ಮಾಡುತ್ತಿದ್ದಳಂತೆ? ಜೊತೆಗಿರುತ್ತೇನೆನ್ನುವ ಅಪ್ಪ, ಅಮ್ಮನನ್ನು ಬಿಟ್ಟುಹಾಕುತ್ತಿದ್ದಳಾ?

ರಾಮಚಂದ್ರನ ಕೈ ಹಿಡಿದು ಕೂತಿದ್ದ ನಾಗಶ್ರೀ ನಿಧಾನಕ್ಕೆ ಆ ಕೈಯನ್ನು ಮೇಲಕ್ಕೆತ್ತಿ ತಾಂಬೂಲದಿಂದ ರಾಗರಂಜಿತವಾದ ತನ್ನ ತುಟಿಗಳಿಗೆ ಒತ್ತಿಕೊಂಡಳು. ಜುಮ್ ಎನ್ನಬೇಕಿತ್ತು ದೇಹ. ಆದರೆ ಹಾಗಾಗಲಿಲ್ಲ. ಇದುವರೆಗೆ ನಾಗಶ್ರೀ ಪ್ರಸ್ತಾಪ ಮಾಡಿದ ವಿಷಯದ ಕಾರಣದಿಂದಲೇ? ಒಂದು ಪುಣ್ಯ ಅಂದರೆ ತಾನು ಇವಳ ಅಪ್ಪನ ಹತ್ತಿರ ಹಣ ಬೇಡಲು ಬರಲಿಲ್ಲ. ಸಾಲವೋ, ಸೋಲವೋ ತನ್ನ ಹಣೆಗೆ ಹತ್ತಿದ್ದು. ಇವಳ ಮಾತು ಕೇಳುತ್ತಿದ್ದರೆ ಈ ಮನೆಯಲ್ಲಿ ಈ ಕುರಿತಾಗಿ ಬಹಳಷ್ಟು ಚರ್ಚೆ ನಡೆದಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ನಾಗಶ್ರೀ ಹೇಳಿದಂತೆ ಇವಳ ಅಪ್ಪನನ್ನು ಮಧ್ಯಸ್ಥಿಕೆಗೆ ಕರೆದಿದ್ದರೆ ಸಲೀಸಾಗಿ ಬಗೆಹರಿಯುತ್ತಿರಲಿಲ್ಲ ವ್ಯವಹಾರ. ಸಾವಿನ ಮನೆಯಲ್ಲಿ ಚೌಕಾಶಿ ಮಾಡುತ್ತಾ ಕೂರುವ ನೆನವರಿಕೆಯಿಂದಲೇ ರಾಮಚಂದ್ರನಿಗೆ ಜಿಗುಪ್ಸೆಯಾಯ್ತು. ಈ ಜನ ಯಾವ ಥರದವರು? ಎಂದು ಅನ್ನಿಸಿಯೇ ಅನ್ನಿಸಿತು. ತನ್ನಣ್ಣನ ಆತ್ಮ ಆ ಮನೆಯ ಸುತ್ತಮುತ್ತಲೇ ಅಲೆದಾಡಿಕೊಂಡಿದ್ದು ಇಂತಾದ್ದೊಂದು ಚೌಕಾಶಿ ವ್ಯವಹಾರಕ್ಕೆ ಪರೋಕ್ಷ ಸಾಕ್ಷಿಯಾಗುವಂತಿದ್ದಿದ್ದರೆ ಏನೆನಿಸಬಹುದಿತ್ತು ಅಣ್ಣನಿಗೆ? ನೀನೂ.. ಎನ್ನುತ್ತಾ ಅವನು ತನ್ನನ್ನು ಅಸಹಾಯಕತೆಯ, ಅಪನಂಬಿಕೆಯ ದೃಷ್ಟಿಯಿಂದ ಈಕ್ಷಿಸಬಹುದಿತ್ತಲ್ಲವೇ? ಯಾರು ಏನೇ ಅನ್ನಲಿ, ಅಂತರಾತ್ಮಕ್ಕೆ ಒಪ್ಪಿತವಾಗುವಂತೆ ನಡೆದುಕೊಂಡಿದ್ದೇನೆ ತಾನು. ಈ ಕುರಿತು ಯಾವತ್ತೂ ತನಗೆ ಪಶ್ಚಾತ್ತಾಪವಾಗುವುದಿಲ್ಲ ಅಂದುಕೊಂಡ ರಾಮಚಂದ್ರ. ಸರಿಯಾಗಿ ಇದೇ ಹೊತ್ತಿಗೆ ನಾಗಶ್ರೀ ತನ್ನ ಬಾಹುಗಳಲ್ಲಿ ಅವನನ್ನು ಬಳಸಿ ಹಿಡಿದಳು.

ಹೋಗ್ಲಿ ಬಿಟ್ಬಿಡಿ. ಏನೋ ಹೇಳಬೇಕು ಅನ್ನಿಸ್ತು, ಹೇಳ್ದೆ. ನನ್ನ ಮನಸ್ಸಿಗೆ ಏನು ಅನ್ಸುತ್ತೋ ಅದನ್ನ ನಿಮ್ಹತ್ರ ಹೇಳಿಕೊಳ್ದೆ ಮತ್ತ್ಯಾರ ಹತ್ರ ಹೇಳ್ಲಿ? ಇಷ್ಟು ಮಾತಾಡಿದ್ಮೇಲೆ ಸಮಾಧಾನ ಆಯ್ತು ನಂಗೆ.. ಅಂದಳು. ನೀನು ನನ್ನ ಮನಸ್ಸಮಾಧಾನಾನ ಕೆಡಿಸಿದೆ ಅನಿಸಿದ್ದನ್ನು ಹೇಳದೆ ನುಂಗಿಕೊಂಡ ರಾಮಚಂದ್ರ. ಅವನು ಬಯಸಿ ಬಯಸಿ ಬಂದಿದ್ದೇತಕ್ಕೆ ಮತ್ತು ಆಗುತ್ತಿರುವುದೇನು?

ಪಾಪು ಮಲಗಿದಾನನೇ? ಬಾ, ತಲೆಗೆ ಎಣ್ಣೆ ಹಾಕ್ತೀನಿ. ಇವತ್ತು ಬಾಣಂತಿ ಬಚ್ಚಲು, ನೆನಪುಂಟಲ್ವಾ?

ಅಮ್ಮನ ದನಿ ಕೇಳಿ ತಟ್ಟನೆ ಗಂಡನಿಂದ ದೂರ ಸರಿದು ಕೂತಳು ನಾಗಶ್ರೀ. ಇವಳೊಬ್ಳು.. ಎನ್ನುತ್ತಾ ಮೂತಿ ಉದ್ದ ಮಾಡಿದಳು. ಅವಳು ನಿರೀಕ್ಷಿಸಿರಬಹುದಾದ ರೀತಿಯಲ್ಲಿ ಪ್ರತಿಕ್ರಿಯಿಸದೆ ರಾಮಚಂದ್ರ, ಹೋಗು.., ಹೋಗು.. ಎನ್ನುತ್ತಾ ತಾನೂ ಅಲ್ಲಿಂದೆದ್ದ. ಮುಂಚೇಕಡೆಗೆ ಹೋಗಿ ಮಾವ ಓದಿ ಬಿಟ್ಟಿದ್ದ ಪೇಪರನ್ನು ಕೈಗೆತ್ತಿಕೊಂಡ.

★★★

ಮಧ್ಯಾಹ್ನ ಉಂಡಾದ ಮೇಲೆ ಹೇಳಿದ್ದರು ಮಾವ, ಹೋಗಿ ಒಂದು ಗಳಿಗೆ ಮಲಕ್ಕಾ. ಉಪ್ಪರಿಗೆ ಮೇಲೆ ಹಾಸಿಗೆ ಹಾಸಿಟ್ಟಿದೆ..

ಮಾತಾಡದೆ ರಾಮಚಂದ್ರ ಉಪ್ಪರಿಗೆ ಮೆಟ್ಟಿಲು ಹತ್ತಿದ. ಯಾವ ಕೋಣೆ ದಂಪತಿಯ ಸರಸಸಲ್ಲಾಪಗಳಿಂದ ಸಗ್ಗವನ್ನು ಭುವಿಗಿಳಿಸಿ ಅದು ನಿರಂತರ ಎನ್ನುವ ಭ್ರಮೆಯನ್ನುಂಟುಮಾಡಿತ್ತೋ ಅದೇ ಕೋಣೆಯಲ್ಲಿ ರಾಮಚಂದ್ರ ಮಂಚದ ಮೇಲೆ ಬಿಚ್ಚಿಟ್ಟಿದ್ದ ಲೇಪಿನ ಮೇಲೆ ಪವಡಿಸಿದ. ನಾಗಶ್ರೀ ಆಡಿದ ಮಾತುಗಳೆಲ್ಲವೂ ತಲೆಯಲ್ಲಿ ಸುತ್ತು ಹಾಕುತ್ತಲೇ ಇದ್ದುವು. ಇದು ಅವಳೊಬ್ಬಳ ಅಭಿಪ್ರಾಯ ಅಲ್ಲ ಎಂದು ಅವನಿಗೆ ಗೊತ್ತಿದೆ. ಬಹುಶಃ ಅಣ್ಣ ಸತ್ತಾಗಿನಿಂದ ಈ ಮನೆಯಲ್ಲಿ ಮುಂದಿನ ಪರಿಣಾಮಗಳ ಕುರಿತಾದ ಚರ್ಚೆ, ಪರಾಮರ್ಶೆ ನಡೆಯುತ್ತಲೇ ಇದ್ದಿರಬೇಕು. ತಮಗಿಂತಾ ಹೆಚ್ಚು ಇವರೇ ಭವಿಷ್ಯದ ವಿಷಯದಲ್ಲಿ ತಲೆ ಕೆಡಿಸಿಕೊಂಡಿರಬೇಕು. ಪಾಲುಪಟ್ಟಿಯ ಪ್ರಸ್ತಾಪ



ರಾಮಚಂದ್ರ ತನ್ನ ಅಮ್ಮನಿಗೆ ಧೈರ್ಯ ತುಂಬಿದ. ಅಮ್ಮನ ಉಚಾರ ಮಾಡುತ್ತಿದ್ದವನಿಗೆ ದಣಿವು ಎನ್ನಿಸುತ್ತಿತ್ತು. ಒಂದು ತಿಂಗಳಿಂದ ಊಟೋಪಚಾರವೂ ಸರಿ ಇರಲಿಲ್ಲ. ಅದರಿಂದ ತಾನು ಬಲಿಷ್ಠನಾಗಬೇಕು ಎಂದು ಯೋಚಿಸಿದ. ತನ್ನ ಹೆಂಡತಿ ಜೊತೆ ಮಾತನಾಡಿಯೇ ಎಷ್ಟೋ ದಿನ ಕಳೆದಿದ್ದವು. ಪುರುಸೊತ್ತು ಇಲ್ಲದಷ್ಟು ಕೆಲಸದ ಒತ್ತಡ ಅವನನ್ನು ಹಿಂಡಿಹಾಕಿತ್ತು. ಅಮ್ಮನಿಗೆ ಉಣ್ಣಲು ಹೇಳುತ್ತಾನೆ. ಕುತ್ತಿಗೆ ತನಕ ಉಂಡಾಗಿದೆ. ಉಣ್ಣೋಕೆ ಏಣು ಉಳ್ಕೊಂಡಿದೆ ಎಂದು ರಾಧಮ್ಮ ಹೇಳುತ್ತಾಳೆ. ಅದಕ್ಕೆ ರಾಮಚಂದ್ರ ಹಂಗಾದರೆ ನಾನು ಮನೆ ಬಿಟ್ಟು ಹೋಗುತ್ತೇನೆ ಎನ್ನುತ್ತಾನೆ.

ನಾನು ನಿನ್ನಪ್ಪ ಈ ಮನೆಯನ್ನು ಎಷ್ಟು ಕಷ್ಟಪಟ್ಟಿ ಕಟ್ಟಿದಿದೀವಿ. ನಿಮ್ಮಪ್ಪ ಒಂದೊಂದು ಸಲ ಗಂಜಿಯನ್ನೇ ಉಂಡಿದ್ದೀವಿ. ನಿಮ್ಮಪ್ಪ ಕೈಯಾರೆ ಗೋಡೆಯನ್ನು ಕಟ್ಟಿದ್ದರು. ಕೊನೆಗಾಲದಲ್ಲಿ ಇಂತಹ ಮನೆಯನ್ನು ನನ್ನಿಂದ ದೂರಮಾಡಬೇಡ.

ನೀನೇನು ಮನೆ– ಹೊಲ ಮಾರಿ ನಾನೇನು ನನ್ನ ಮಾವನ ಮನೆ ಸೇರುತ್ತೇನೆ ಅಂದುಕೊಂಡಿದ್ದೀಯಾ? ಎಂದು ಸಮಾಧಾನ ಮಾಡಿದಾಗ ರಾಧಮ್ಮ ನಿರಾಳರಾದರು.

ಬಂದಾಗ ಮಾವನನ್ನು ಅಲಕ್ಷಿಸಲಾಯ್ತು ಎಂದು ಅವರು ನೊಂದುಕೊಂಡಿದ್ದರೆ ಅದರಲ್ಲಿ ಅರ್ಥವಿಲ್ಲ. ಯಾರದ್ದೋ ಮಧ್ಯಸ್ಥಿಕೆ ಅನಿವಾರ್ಯವಾಗುವುದು ಯಾವಾಗ? ಪಾಲು ಮಾಡಿಕೊಳ್ಳುವವರ ನಡುವೆ ಏನಾದರೂ ತಕರಾರು, ಮನಸ್ತಾಪ ಇದ್ದಾಗ. ಅಂತಾದ್ದೇನಿರಲಿಲ್ಲ. ಇನ್ನಷ್ಟು ಕೊಡಿ.. ಎಂದು ಅತ್ತಿಗೆಯ ಪೈಕಿಯವರು ರಾಗ ಎಳೆಯಲಿಲ್ಲ. ತಾನು ಕೊಟ್ಟಷ್ಟು, ಅವರು ತೆಗೆದುಕೊಂಡಷ್ಟು. ಇವನು ಪ್ರಾಮಾಣಿಕ ಎಂದು ಅವರಿಗೆ ಗೊತ್ತಿದೆ. ಅವರು ಸಭ್ಯಸ್ಥರು ಎಂದು ಇವನಿಗೆ ಗೊತ್ತಿದೆ. ಕಡಲೆ ತಿಂದು ಕೈ ತೊಳೆದುಕೊಂಡ ಹಾಗೆ ಎನ್ನುವಂತೆ ಎಲ್ಲಾ ಮುಗಿದು ಹೋಗಿತ್ತು. ಯಾವ ಒಂದು ಗೋಜಲಿಗೂ ಅವಕಾಶವಿಲ್ಲದೆ ತಮ್ಮತಮ್ಮೊಳಗೆ ನಡೆದ ಒಂದು ವ್ಯವಹಾರ ಇಂತಾದ್ದೊಂದು ಮುನಿಸಿಗೆ ಕಾರಣವಾಗಿ ಕೂತಿದೆ ಎಂದು ಹೆಂಡತಿ ಬಾಯಿ ಬಿಟ್ಟು ಹೇಳದಿದ್ದರೆ ಗೊತ್ತೇ ಆಗುತ್ತಿರಲಿಲ್ಲ ರಾಮಚಂದ್ರನಿಗೆ. ಇದಕ್ಕೇನಾ ಹೆಂಡತಿ ಫೋನ್ ಮಾಡುವುದನ್ನು ಕಮ್ಮಿ ಮಾಡಿದ್ದು? ಅವನಾಗಿ ಮಾಡಿದರೂ ಹೆಚ್ಚು ಮಾತಾಡದೆ ಬಿಗಿಯಾಗಿರುತ್ತಿದ್ದಿದ್ದು? ಇನ್ನೂ ಏನೇನು ಪರೀಕ್ಷೆ ಕಾದಿದೆಯೋ? ತಾನು ಯೋಚಿಸಿಯೂ ಇರದಿದ್ದಂತಾ ಏನೇನನ್ನೆಲ್ಲಾ ಇವರು ಗುಡ್ಡ ಗುಣಿಸಿಕೊಂಡು ಕೂತಿದ್ದಾರೋ? ರಾಮಚಂದ್ರ ಅಸ್ವಸ್ಥನಾದ. ಬೆಳಬೆಳಗಾತ ಬೇಗ ಎದ್ದು ಬಂದಿದ್ದರೂ ಕಣ್ಣು ಬಾಡದೆ ಹೊರಳಾಡಿದ.

ಅಪರೂಪಕ್ಕೆ ಬಂದ ಅಳಿಯನಿಗೆ ಮಾವನಮನೆಯಲ್ಲಿ ಯಥಾಯೋಗ್ಯ ಉಪಚಾರ ದೊರಕಿತು. ತಟ್ಟೆ ತುಂಬಾ ಬಾಳೇಕಾಯಿ ಬುರುಬುರಿ, ಮೈಸೂರುಪಾಕು ತಂದಿಟ್ಟು ಅತ್ತೆಮ್ಮ ಆತಿಥ್ಯಧರ್ಮವನ್ನು ನಿಭಾಯಿಸಿದರು. ತಿಂಡಿ ತಿಂದು, ಕಾಫಿ ಕುಡಿದು, ರಾಮಚಂದ್ರ ವಿರಾಮವಾಗಿ ಕೂತಿದ್ದ ಸಂದರ್ಭದಲ್ಲಿ ಒಳಗಿನಿಂದ ಮಗನನ್ನೆತ್ತಿಕೊಂಡು ಬಂದಳು ನಾಗಶ್ರೀ.

ನಿಮ್ಮ ಮಗಂಗೆ ಈಗ ಬೆಳಗಾತು. ಎತ್ಗಂತೀರಾದ್ರೆ ನೋಡಿ. ನೆಲದ ಮೇಲೆ ಚಟ್ಟೆಮುಟ್ಟೆ ಹಾಕಿ ಕೂತ್ಗಂಡ್ರೆ ಕೊಡ್ತೀನಿ.. ಅಂದಳು.